## ಸೂಕ್ತಿಪ್ರಭ

ಯಾವುದೇ ಕುದುರೆಯನ್ನೂ ಪಳಗಿಸದಿದ್ದರೆ ಓಡಿಸಲಾಗುವುದಿಲ್ಲ. ಯಾವುದೇ ಉಗಿ ಅಥವಾ ಅನಿಲ ಒಗ್ಗೂಡಿಸದಿದ್ದರೆ ಯಾವುದನ್ನೂ ಚಲಿಸುವುದಿಲ್ಲ. ಹಾಗೆಯೇ ಸರಿಯಾದ ನಿರ್ದೇಶನ, ನಿಷ್ಠೆ ಮತ್ತು ಶಿಸ್ತು ಇಲ್ಲದೆ ಯಾವ ಜೀವನವೂ ಶ್ರೇಷ್ಠತೆಯನ್ನು ಮುಟ್ಟುವುದಿಲ್ಲ. —*ಹ್ಯಾರಿ ಎಮರ್ಸನ್ ಫಾಸ್ಡಿಕ್*
**(*Harry Emerson Fosdick*)**

ಯಶಸ್ಸು ಮತ್ತು ವಿಶ್ರಾಂತಿ ಒಟ್ಟಿಗೆ ನಿದ್ರಿಸಲಾರವು.
—*ರಶಿಯನ್ ಗಾದೆ*

ಕೀರ್ತಿಗೆ ಅರ್ಹರಾಗಿದ್ದು ಅದನ್ನು ಪಡೆಯದಿರುವುದು ಅರ್ಹತೆಯಿಲ್ಲದೆ ಅದನ್ನು ಪಡೆಯುವುದಕ್ಕಿಂತ ಎಷ್ಟೋ ಲೇಸು. —*ಮಾರ್ಕ್ ಟ್ವೈನ್*

ಜನರು ಅಸಾಧಾರಣ ವಿಷಯಗಳಲ್ಲಿ ತಾವು ಬಯಸಿದಂತೆ ಕಾಣಿಸಿಕೊಳ್ಳುತ್ತಾರೆ; ಸಾಧಾರಣ ವಿಷಯಗಳಲ್ಲಿ ತಾವಿರುವಂತೆ ಕಾಣಿಸಿಕೊಳ್ಳುತ್ತಾರೆ.
—*ಗ್ಯಮ್ಯಾಲಿಯಲ್ ಬ್ರಾಡ್‌ಫೋರ್ಡ್*
**(*Gamoliel Bradford*)**

ಅಜ್ಞಾನಿಯನ್ನು ವಾದದಲ್ಲಿ ಸೋಲಿಸುವುದು ಅಸಾಧ್ಯ. —*ವಿಲಿಯಮ್. ಜಿ. ಮ್ಯಾಕ್‌ಡೂ*
**(*William G. McAdoo*)**

ಮಾನವರು ನಿಸ್ಸಂದೇಹವಾಗಿ ತಾವೇ ಸರಿ ಎಂದು ದೃಢನಿಶ್ಚಯ ಹೊಂದಿದಾಗ ಬಹುಶಃ ಬೇರೆ ಎಲ್ಲ ಸಂದರ್ಭಗಳಿಗಿಂತ ಹೆಚ್ಚು ಭಯಂಕರರಾಗಿರುತ್ತಾರೆ.
—*ಲಾರೆಂಸ್ ವಾನ್ ಡರ್ ಪೋಸ್ಟ್*
**(*Laurens Van der Post*)**

ನಿಜವಾದ ಗೆಳೆತನ ಉತ್ತಮ ಆರೋಗ್ಯವಿದ್ದಂತೆ, ಅದನ್ನು ಕಳೆದುಕೊಂಡಾಗಲೇ ಅದರ ಮೌಲ್ಯ ತಿಳಿದು ಬರುವುದು. —*ಚಾರ್ಲ್ಸ್ ಕ್ಯಾಲಿಬ್ ಕೋಲ್ಟನ್*
**(*Charles Caleb Colton*)**

ಅಪಾಯಕ್ಕೆ ಮುಂಚೆ ಹೆದರುವವನು ಪುಕ್ಕಲ, ಆ ಸಂದರ್ಭದಲ್ಲಿ ಹೆದರುವವನು ಹೇಡಿ ಮತ್ತು ಅನಂತರ ಹೆದರುವವನು ಧೀರ.
—*ಜೀನ್ ಪಾಲ್ ರಿಟ್‌ಚರ್* **(*Jean Paul Richter*)**

ನಿಮ್ಮ ಕಷ್ಟಗಳಿಗಾಗಿ ನೀವು ನಗುವುದನ್ನು ಕಲಿತರೆ, ನೀವು ನಗುವ ಸಂದರ್ಭಗಳಿಂದ ವಂಚಿತರಾಗುವುದೇ ಇಲ್ಲ. —*ಲಿನ್ ಕ್ಯಾರಲ್* **(*Lyn Karol*)**

# ಪ್ರಾರ್ಥನೆ

## "ಬ್ರಹ್ಮಸ್ತೋತ್ರ"

*ಮಹಾನಿರ್ವಾಣ ತಂತ್ರದಿಂದ*

**ಓಂ ನಮಸ್ತೇ ಸತೇ ಸರ್ವಲೋಕಾಶ್ರಯಾಯ**
**ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ ।**
**ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ**
**ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ ॥೧॥**

ಸರ್ವಲೋಕಗಳ ಆಶ್ರಯನೂ, ಸತ್‌ಸ್ವರೂಪಿಯೂ ಆದ ನಿನಗೆ ನಮಸ್ಕಾರ. ವಿಶ್ವರೂಪಿಯೂ, ಚಿತ್‌ಸ್ವರೂಪಿಯೂ ಆದ ನಿನಗೆ ನಮಸ್ಕಾರ. ಏಕಮಾತ್ರವಸ್ತುವೂ, ಮುಕ್ತಿದಾಯಕನೂ ಆದ ನಿನಗೆ ನಮಸ್ಕಾರ. ಸರ್ವವ್ಯಾಪಿಯೂ ಗುಣಗಳನ್ನು ಮೀರಿದ ಪರಬ್ರಹ್ಮನೂ ಆದ ನಿನಗೆ ನಮಸ್ಕಾರ.

**ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ**
**ತ್ವಮೇಕಂ ಜಗತ್ಕಾರಣಂ ವಿಶ್ವರೂಪಮ್ ।**
**ತ್ವಮೇಕಂ ಜಗತ್ಕರ್ತೃಪಾತೃಪ್ರಹರ್ತೃ**
**ತ್ವಮೇಕಂ ಪರಂ ನಿಶ್ಚಲಂ ನಿರ್ವಿಕಲ್ಪಮ್ ॥೨॥**

ಏಕಮಾತ್ರ ಆಶ್ರಯನೂ ಪೂಜನೀಯನೂ (ಅಪೇಕ್ಷಣೀಯನೂ) ನೀನೆ. ಜಗತ್ತಿನ ಏಕಮಾತ್ರ ಕಾರಣನೂ, ವಿಶ್ವರೂಪಿಯೂ ನೀನೆ. ಜಗತ್ತಿನ ಸೃಷ್ಟಿಕರ್ತ, ಪಾಲಕ ಮತ್ತು ಸಂಹಾರಕನೂ ನೀನೆ. ಸ್ಥಿರವಾದ ಮತ್ತು ಬದಲಾವಣೆಯಿಲ್ಲದ ಪರಮತತ್ತ್ವವೂ ನೀನೆ.

**ಭಯಾನಾಂ ಭಯಂ ಭೀಷಣಂ ಭೀಷಣಾನಾಂ**
**ಗತಿಃ ಪ್ರಾಣಿನಾಂ ಪಾವನಂ ಪಾವನಾನಾಮ್ ।**
**ಮಹೋಚ್ಚೈಃ ಪದಾನಾಂ ನಿಯಂತೃ ತ್ವಮೇಕಂ**
**ಪರೇಷಾಂ ಪರಂ ರಕ್ಷಕಂ ರಕ್ಷಕಾಣಾಮ್ ॥೩॥**

ಭಯಕ್ಕೆ ಭಯಂಕರನು ನೀನು; ಭೀಷಣಕ್ಕೆ ಭೀಷಣಕಾರಿಯು ನೀನು. ಎಲ್ಲ ಪ್ರಾಣಿಗಳ ಗತಿ ನೀನೇ, ಪವಿತ್ರ ಮಾಡುವ ವಸ್ತುಗಳನ್ನು ಪಾವನಗೊಳಿಸುವವನು ನೀನೆ. ಅತ್ಯುಚ್ಚ ಸ್ಥಾನದಲ್ಲಿರುವವರನ್ನು ಆಳುವವನು ನೀನು. ಪರಾತ್ಪರನೂ ರಕ್ಷಕರನ್ನು ರಕ್ಷಿಸುವವನೂ ನೀನೆ.

**ತದೇಕಂ ಸ್ಮರಾಮಸ್ತದೇಕಂ ಭಜಾಮ-**
**ಸ್ತದೇಕಂ ಜಗತ್ಸಾಕ್ಷಿರೂಪಂ ನಮಾಮಃ ।**
**ಸದೇಕಂ ನಿಧಾನಂ ನಿರಾಲಂಬಮೀಶಂ**
**ಭವಾಂಭೋಧಿಪೋತಂ ಶರಣ್ಯಂ ವ್ರಜಾಮಃ ॥೪॥**

ಅಂತಹ ಏಕಮಾತ್ರನಾದ ನಿನ್ನನ್ನೇ ಸ್ಮರಿಸುತ್ತೇವೆ; ನಿನ್ನನ್ನೇ ಭಜಿಸುತ್ತೇವೆ. ಜಗತ್ತಿಗೆಲ್ಲಾ ಏಕಮಾತ್ರ ಸಾಕ್ಷಿರೂಪನಾದ ನಿನಗೇ ನಮಸ್ಕರಿಸುತ್ತೇವೆ. ನಮ್ಮ ಏಕಮಾತ್ರ ಆಧಾರನೂ, ಸ್ವತಂತ್ರ ಪ್ರಭುವೂ, ಭವಸಾಗರಕ್ಕೆ ನೌಕಾಪ್ರಾಯನಾಗಿರುವವನೂ ಆದ ನಿನ್ನಲ್ಲಿಯೇ ಶರಣುಹೋಗುತ್ತೇವೆ.